# ಕಾಗೆ ಕಾಕಾ ಎನಲು

**Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 31.

ರಾಗ: ಧನ್ಯಾಸಿ ತಾಳ: ಝಂಪೆ

ಕಾಗೆ ಕಾಕಾ ಎನಲು ಹಕ್ಕಿ ಚಿಲಿಪಿಲಿ ಎನಲು
ಕೋಗಿಲೆಯು ಸ್ವರಗೈಯ್ಯಲು - ಕೃಷ್ಣ- ನಾಗಸಂಪಿಗೆ ಅರಳಲು || ಪ ||

ಎದ್ದು ಮುಖ ತೊಳೆಯೇಳು ತಿದ್ದು ಕಸ್ತೂರಿ ತಿಲಕ
ಮುದ್ದೆ ಬೆಣ್ಣೆಯ ನಿನಗೆ ನಾನು ಕೊಡುವೆ
ಹೊದ್ದಿರುವ ಕತ್ತಲದು ಹರಿದು ಬೆಳಗಾಯಿತೊ
ನಿದ್ದೆ ತಿಳಿದೇಳಯ್ಯ ಕೃಷ್ಣ || 1 ||

ಬಿಸಿಯ ದೋಸೆಯ ಹೊಯ್ದು ಮೊಸರು ಗಡ್ಡೆಯ ತೆಗೆದು
ಹೊಸದಾದ ಹಸುವಿನೀ ತುಪ್ಪವನ್ನು
ಹಸನಾದ ಕಲಸನ್ನ ಹೆಸರು ಬೇಳೆಯ ಹುಗ್ಗಿ
ಹಸುಳೆ ನಿನಗಾರೋಗಣೆಗೆ ಮಾಡುವೆ || 2 ||

ಎಂದಿಲ್ಲದಾ ಹಟವನಿಂದೇಕೆ ಮಾಡುತಿಹೆ
ಕಂದರೊಳಗತಿ ನೀನು ಹಟಿಯಾದೆಯ
ಇಂದು ನೀನತ್ತರೇ ಎತ್ತಿಕೊಳ್ಳುವರಿಲ್ಲ
ಕಂದ ಅಳಬೇಡವೊ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬೆಳಗಿನಲ್ಲಿ ತಾಯಿ ಯಶೋದೆ ಬಾಲಕೃಷ್ಣನನ್ನು ಒಲವಿನಿಂದ ಎಬ್ಬಿಸುತ್ತಿದ್ದಾಳೆ.

**ಹೊದ್ದಿರುವ** = ಮುಸುಕಿದ

**ತಿಳಿ** = ಎಚ್ಚರಾಗು

**Classification:** Keethane
**Ankita:** purandara vittala
**Location:** NA
**Category:** Krishna Stuti, Krishna Leele
**Sub-Category:** Krishna, anna, huggi, govu, Kasturi, beligge, kAge, pakshi, yashode
**Pravachana:** NA
**Explanation:** NA